ಇ) ಹೈರಿಗೆ ಕೆರೆಯನ್ನು ಮೀನುಗಾರಿಕೆ ಸಹಕಾರಿ ಸಂಘ ಹೈರಿಗೆರವರಿಗೆ ಕರ್ನಾಟಕ ಸಹಕಾರಿ ಮೀನುಗಾರಿಕೆ ಮಹಾ ಮಂಡಳಿ, ಮೈಸೂರು ರವರ ಮುಖಾಂತರ 2002-03 ರಿಂದ 2004-05 ರವರೆಗೆ ಗುತ್ತಿಗೆ ನೀಡಲಾಗಿದೆ.

ಈ) ಅನಧಿಕೃತವಾಗಿ ಹಿಡುವಳಿ ಮಾಡಿದ ಮೀನು ಸಂಪತ್ತನ್ನು ಜಪ್ತಿ ಮಾಡಿ ನಂತರ ಮಾರಾಟ ಮಾಡಿದ್ದು, ಇದರಿಂದ ಬಂದ ಹಣವನ್ನು ಸರ್ಕಾರಕ್ಕೆ ಜಮಾ ಮಾಡಲಾಗಿದೆ.

ಉ) ದಾಖಲಾತಿಗಳನ್ನು ಮುಂದಿನ ಕ್ರಮಕ್ಕಾಗಿ ಪಡೆದುಕೊಳ್ಳಲಾಗಿದೆ.

ರಾಜ್ಯದಲ್ಲಿ ಸಣ್ಣ ಕೈಗಾರಿಕೆ ಘಟಕಗಳಿಗೆ ಸಬ್ಸಿಡಿ ಹಣ ಬಿಡುಗಡೆ

2115 (2285) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ಮುಂಡರಗಿ): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಸಣ್ಣ ಕೈಗಾರಿಕಾ ಘಟಕಗಳಿವೆ? (ಜಿಲ್ಲಾವಾರು ಪಟ್ಟಿ ಒದಗಿಸುವುದು) ಎಷ್ಟು ವರ್ಷಗಳಿಂದ ಬಾಕಿ ಹಣವನ್ನು ನೀಡದೇ ಹಾಗೇ ಉಳಿಸಿಕೊಂಡಿದೆ;

ಆ) ಈ ಸಣ್ಣ ಕೈಗಾರಿಕಾ ಘಟಕಗಳಿಗೆ ಸರ್ಕಾರ ಸಬ್ಸಿಡಿ ಬಾಕಿ ಹಣವನ್ನು ನೀಡಿದೆಯೇ ನೀಡಿದ್ದರೆ ಯಾವ ಯಾವ ಜಿಲ್ಲೆಗಳಿಗೆ ಎಷ್ಟೆಷ್ಟು ಹಣ ನೀಡಲಾಗಿದೆ;

ಇ) ಸಬ್ಸಿಡಿ ಬಾಕಿ ಹಣವನ್ನು ನೀಡದೇ ಇದ್ದಲ್ಲಿ, ಕಾರಣಗಳೇನು? ಯಾವ ಕಾಲಮಿತಿ ಒಳಗಾಗಿ ಬಾಕಿ ಹಣವನ್ನು ನೀಡಲಾಗುವುದು?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಪ್ರಮಾಣದ ಕೈಗಾರಿಕೆ ಹಾಗೂ ಹಜ್ ಸಚಿವರು):

ಅ) ದಿನಾಂಕ 31-01-2003ರ ಅಂತ್ಯಕ್ಕೆ ರಾಜ್ಯದಲ್ಲಿ 294620 ಸಣ್ಣ ಕೈಗಾರಿಕಾ ಘಟಕಗಳು ನೋಂದಾಯಿಸಲ್ಪಟ್ಟಿವೆ. ಜಿಲ್ಲಾವಾರು ಪಟ್ಟಿ ಅನುಬಂಧ-1ರಲ್ಲಿ ಲಗತ್ತಿಸಿದೆ. ದಿನಾಂಕ 1-01-1999 ರಿಂದ ಬಾಕಿ ಸಬ್ಸಿಡಿ ಹಣವನ್ನು ಉಳಿಸಿಕೊಂಡಿದೆ.

ಆ) 2002-03ರ ಆಯವ್ಯಯದಲ್ಲಿ ರೂ. 16.20 ಕೋಟಿಗಳನ್ನು ಅತಿ ಸಣ್ಣ : ಸಣ್ಣ ಕೈಗಾರಿಕಾ ಘಟಕಗಳಿಗೆ ಸಹಾಯಧನ ಬಿಡುಗಡೆ ಸಲುವಾಗಿ ಒದಗಿಸಲಾಗಿದೆ. ರೂ. 5.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಲಾಗಿದೆ.

ಇ) ಆಯವ್ಯಯದಲ್ಲಿ ಒದಗಿಸಿರುವ ಅನುದಾನವು ಸಹಾಯಧನ ಮಂಜೂರಾತಿಗಿಂತಲೂ ಕಡಿಮೆ ಇರುವುದರಿಂದ ಬಾಕಿ ಹಣವನ್ನು ನೀಡಲು ಸಾಧ್ಯವಾಗುತ್ತಿಲ್ಲ. ಆಯವ್ಯಯದಲ್ಲಿ ಹಣವನ್ನು ಒದಗಿಸಲು ಆದಷ್ಟು ಪ್ರಯತ್ನ ಮಾಡಲಾಗುತ್ತಿದೆ.

Legislative Assembly QN. No. 2285

Annexure-1

Registration of Small Scale Industries in Karnataka as on 31-1-2003

Sl. No.	District	No. of Units
1	2	3
1.	Bangalore (U)	53453
2.	Belgaum	26976
3.	Bellary	11276

1	2	3
4.	Bijapur	5418
5.	Bidar	6740
6.	Chickmagalur	5110
7.	Chitradurga	6800
8.	Kodagu	2994
9.	Dharwad	11475
10.	Gulbarga	10806
11.	Hassan	8092
12.	U.K.	6406
13.	D.K.	13910
14.	Kolar	11093
15.	Mandya	6943
16.	Mysore	18028
17.	Raichur	7044
18.	Shimoga	11043
19.	Tumkur	17516
20.	Bangalore (R)	13547
21.	Bagalkote	5317
22.	Chamarajanagar	6716
23.	Davanagere	5998
24.	Gadag	5908
25.	Haveri	6823
26.	Koppal	3402
27.	Udupi	5786
	Total	**294620**

Legislative Assembly QN. No. 2285

Annexure-II

District-wise Details of State Investment subsidy releases for the year 2002-03

Sl. No.	Name of the District	No. of Units	Amount Rs. in lakhs
1.	Bangalore (Urban)	25	57.34
2.	Bangalore (Rural)	25	29.37
3.	Bagalkote	12	18.76
4.	Belgaum	34	56.27
5.	Bellary	10	18.38

1	2	3	4
6.	Bidar	3	2.40
7.	Bijapur	5	9.88
8.	Chamarajanagar	3	13.81
9.	Chitradurga	9	11.47
10.	Chickmagalur	2	2.35
11.	Davangere	14	16.84
12.	Dharwad	5	3.39
13.	Dakshina Kannada	11	17.06
14.	Gadag	3	2.07
15.	Gulbarga	18	40.79
16.	Hassan	6	4.46
17.	Haveri	4	4.54
18.	Karwar	14	12.96
19.	Kodagu	8	11.91
20.	Kolar	16	40.76
21.	Koppal	6	6.68
22.	Mandya	-	-
23.	Mysore	6	19.06
24.	Raichur	6	7.90
25.	Shimoga	11	29.95
26.	Tumkur	18	32.11
27.	Udupi	34	31
	Total	**308**	**501.51**

ಕೂಡಲ ಸಂಗಮದಲ್ಲಿರುವ ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರ (ಉಪಕೇಂದ್ರ)ದ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಬಗ್ಗೆ

2116 (2524) ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ: ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಉಪ ಕೇಂದ್ರ) ಕೂಡಲ ಸಂಗಮದಲ್ಲಿ ಕಾಮಗಾರಿಗಾಗಿ ಬಿಡುಗಡೆಯಾದ ಅನುದಾನವೆಷ್ಟು;

ಆ) ಈ ಅನುದಾನದ ಹಣವನ್ನು ಯಾವ ಯಾವ ಉದ್ದೇಶಗಳಿಗಾಗಿ ಬಳಸಲಾಗಿದೆ;

ಇ) ಕೂಡಲ ಸಂಗಮ ಯಂತ್ರ ಉಪಕರಣಗಳಿಗಾಗಿ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ?

ಶ್ರೀ ಆರ್. ರೋಷನ್ ಬೇಗ್ (ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು)

ಅ) ಕೂಡಲಸಂಗಮ ಪ್ರಾಧಿಕಾರವೇ ಉಪ ಕೇಂದ್ರದ ಕಟ್ಟಡವನ್ನು ಒದಗಿಸಿದೆ. ಆದ್ದರಿಂದ, ಕಾಮಗಾರಿಗಾಗಿ ಯಾವುದೇ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ.